(ಕಂದಾಯ ಇಲಾಖೆ)

# ಸಹಾಯಕಆಯುಕ್ತರವರ ನ್ಯಾಯಾಲಯ, ಹೊಸಪೇಟೆ.

ಎ.ವಿಲೇ.ಸಂ.ಕಂ.ಪಹಣಿ:ಅಪೀಲು:192/2014-15 ದಿನಾಂಕ:09.06.2016.

**ಉಪಸ್ಥಿತರು: ಅವಿನಾಶ್ ಮೆನನ್ ರಾಜೇಂದ್ರನ್, ಭಾ.ಆ.ಸೇ**
**ಸಹಾಯಕ ಆಯುಕ್ತರು, ಹೊಸಪೇಟೆ.**

********

**ವಾದಿಗಳು: ಶ್ರೀ/ ಶ್ರೀಮತಿ**

1] ಮಾಳಗಿ ಗೌರಮ್ಮ ಗಂಡ ದಿ॥ ಮಾಳಗಿ ಗಿರಿಯಪ್ಪ,
2] ಶಿವಕುಮಾರ್ ಗಿರಿಯಪ್ಪ ಮಾಳಗಿ ತಂದೆ ದಿ॥ ಮಾಳಗಿ ಗಿರಿಯಪ್ಪ,
**ಉಭಯರ ವಾಸ**: ಕಮಲ ರಂಗ ನಿಲಯ, 19 ನೇ ವಾರ್ಡ್, ಚವಡಿಕೇರಿ, ಕಮಲಾಪುರ ಪೋಸ್ಟ್, ಹೊಸಪೇಟೆ ತಾಲೂಕು, ಬಳ್ಳಾರಿ ಜಿಲ್ಲೆ.

**[ಶ್ರೀ ಸತ್ಯನಾರಾಯಣ ರಾವ್, ವಕೀಲರು, ಹೊಸಪೇಟೆ]**

**ಪ್ರತಿವಾದಿಗಳು: ಶ್ರೀ/ ಶ್ರೀಮತಿ**

1] ಮಾಳಗಿ ಮಲ್ಲಮ್ಮ ಗಂಡ ದಿ॥ ಮಾಳಗಿ ಗೋವಿಂದಪ್ಪ,
2] ವಿಶ್ವನಾಥ ಮಾಳಗಿ ತಂದೆ ಎಂ.ರುದ್ರಪ್ಪ,
3] ಅನಿಲ್ ಕುಮಾರ್ ಮಾಳಗಿ ತಂದೆ ಎಂ.ರುದ್ರಪ್ಪ,
4] ಮಾರುತಿ ಮಾಳಗಿ ತಂದೆ ಎಂ.ರುದ್ರಪ್ಪ,
**ವಾಸ**: 19 ನೇ ವಾರ್ಡ್, ಚವಡಿಕೇರಿ, ಕಮಲಾಪುರ ಪೋಸ್ಟ್, ಹೊಸಪೇಟೆ ತಾಲೂಕು, ಬಳ್ಳಾರಿ ಜಿಲ್ಲೆ.

**[ ಪ್ರತಿವಾದಿ-1 ರಿಂದ 4 ರವರ ಪರ ವಕೀಲರು, ಶ್ರೀ ಕೆ.ಪ್ರಭಾಕರ್ ರಾವ್, ವಕೀಲರು, ಹೊಸಪೇಟೆ]**

5] ಕಂದಾಯ ನಿರೀಕ್ಷಕರು, ಕಮಲಾಪುರ ಹೋಬಳಿ, ಹೊಸಪೇಟೆ ತಾಲೂಕು.
6] ತಹಶೀಲ್ದಾರರು, ಹೊಸಪೇಟೆ.

**ವ್ಯಾಜ್ಯದಜಮೀನು**

| ತಾಲೂಕು | ಹೋಬಳಿ | ಗ್ರಾಮ | ಸ.ನಂ. | ವಿಸ್ತೀರ್ಣ |
|---|---|---|---|---|
| ಹೊಸಪೇಟೆ | ಕಮಲಾಪುರ | ಕಮಲಾಪುರ | 970 ಪೈಕಿ | 12 ಎಕರೆ 35 ಸೆಂಟ್ಸ್ |

**ಪೀಠಿಕೆ:-**

ಹೊಸಪೇಟೆ ತಾಲೂಕು ಕಮಲಾಪುರ ಹೋಬಳಿ ಕಮಲಾಪುರ ಗ್ರಾಮದ ಸ.ನಂ.970 ಪೈಕಿ ವಿಸ್ತೀರ್ಣ:12 ಎಕರೆ 35 ಸೆಂಟ್ಸ್; ವಿವಾದಾಸ್ಪದ ಜಮೀನಿಗೆ ಸಂಬಂಧಿಸಿದಂತೆ ಕಂದಾಯ ನಿರೀಕ್ಷಕರು, ಕಮಲಾಪುರ ಇವರ ಹಕ್ಕು ಬದಲಾವಣೆ ಆದೇಶ ಸಂಖ್ಯೆ: 1] ಎಂ.ಆರ್.ನಂ.356/2009-10 (ವಿಭಾಗ) ದಿನಾಂಕ:08.07.2010; 2] ಎಂ.ಆರ್.ನಂ.:ಹೆಚ್.117/2013-14 (ದಾನ) ದಿನಾಂಕ:11.06.2014 ವನ್ನು ಪ್ರಶ್ನಿಸಿ ಕರ್ನಾಟಕ ಭೂ ಕಂದಾಯ ಕಾಯ್ದೆ 1964 ರ ಕಲಂ 136(2) ರಡಿಯಲ್ಲಿ ಮೇಲ್ಮನವಿಯನ್ನು ಮತ್ತು ಸದರಿ ಕಾಯ್ದೆಯ ಕಲಂ 55 ರಡಿಯಲ್ಲಿ ಪ್ರಶ್ನಿತ ಆದೇಶಕ್ಕೆ ಪ್ರಕರಣ ಇತ್ಯರ್ಥವಾಗುವವರೆಗೆ ತಡೆಯಾಜ್ಞೆಯನ್ನು ಕೋರಿ ಮನವಿಯನ್ನು ಮತ್ತು ಅಪೀಲು ಸಲ್ಲಿಸುವಲ್ಲಿ ಆಗಿರುವ ವಿಳಂಬವನ್ನು ಮನ್ನಾ ಮಾಡಲು ಕೋರಿ ಕಾಲಮಿತಿ ಕಾಯ್ದೆಯ ಕಲಂ 5 ರಡಿಯಲ್ಲಿ ವಾದಿಪರ ವಕೀಲರು ದಿನಾಂಕ:17.11.2014 ರಂದು ಮೇಲ್ಮನವಿಯನ್ನು ಸಲ್ಲಿಸಿರುತ್ತಾರೆ.

ವಾದಿಗಳ ಪರ ವಕೀಲರು ಸಲ್ಲಿಸಿದ ಕಡತವನ್ನು ಪರಿಶೀಲಿಸಿ, ಅಪೀಲು ಸಲ್ಲಿಸುವಲ್ಲಿ ಆಗಿರುವ ವಿಳಂಬವನ್ನು ಮನ್ನಾ ಮಾಡಿ, ಹಾಗೂ ಸದರಿ ಪ್ರಶ್ನಿತ ಆದೇಶಕ್ಕೆ ಮುಂದಿನ ವಿಚಾರಣೆ ದಿನಾಂಕದವರೆಗೆ ಮಾತ್ರ ತಡೆಯಾಜ್ಞೆಯನ್ನು ನೀಡಿ, ನೈಸರ್ಗಿಕ ಹಿತದೃಷ್ಟಿಯಿಂದ ಪ್ರಕರಣದ ವಿಚಾರಣೆಯನ್ನು ದಿನಾಂಕ:27.01.2015 ಕ್ಕೆ ನಿಗಧಿಪಡಿಸಿ ಉಭಯಪಕ್ಷಗಳಿಗೆ ನೋಟೀಸು ಮೂಲಕ ತಿಳಿಸಿ ವಿಚಾರಣೆಯನ್ನು ಪ್ರಾರಂಭಿಸಲಾಯಿತು.

**ಸದರಿ ಪ್ರಕರಣಕ್ಕೆ ಸಂಬಂಧಿಸಿದಂತೆ ವಾದಿ ಮತ್ತು ಪ್ರತಿವಾದಿಗಳ ವಾದ ಮತ್ತು ವಿವಾದ ಹಾಗೂ ಲಿಖಿತ ವಾದಗಳನ್ನು, ಹಾಗೂ ಕಡತದಲ್ಲಿಯ ದಾಖಲೆಗಳನ್ನು ಪರಿಶೀಲಿಸಲಾಗಿ ಈ ಕೆಳಕಂಡ ಅಂಶಗಳು ಕಂಡು ಬಂದಿರುತ್ತವೆ.**

1. ವಾದಿಗಳ ಪ್ರಕಾರ ಸದರಿ ವ್ಯಾಜ್ಯದ ಜಮೀನು ಮೂಲತ: ವಾದಿ ಮತ್ತು ಪ್ರತಿವಾದಿಗಳ ಪಿತ್ರಾರ್ಜಿತ ಆಸ್ತಿಯಾಗಿದ್ದು, ಕಮಲಾಪುರ ನಿವಾಸಿಯಾದ ಶ್ರೀ ಮಾಳಗಿ ಗೋವಿಂದಪ್ಪ ಇವರಿಗೆ ಸಂಬಂಧಿಸಿದ್ದು, ಸದರಿಯವರು ದಿನಾಂಕ:24.09.1994 ರಂದು ಮರಣ ಹೊಂದಿರುವುದಾಗಿ, ಸದರಿಯವರು ಇವರ ಹೆಂಡತಿಯಾದ ಶ್ರೀಮತಿ ಮಾಳಗಿ ಮಲ್ಲಮ್ಮ [ಪ್ರತಿವಾದಿ-1], ಮಕ್ಕಳಾದ 1] ಮಾಳಗಿ ರುದ್ರಪ್ಪ [ಪ್ರತಿವಾದಿ-2 ರಿಂದ 4 ರವರ ತಂದೆ], 2] ಮಾಳಗಿ ಗಿರಿಯಪ್ಪ [ವಾದಿ-1 ರವರ ಗಂಡ, ವಾದಿ-2 ರವರ ತಂದೆ] ಇವರುಗಳನ್ನು ತಮ್ಮ ವಾರಸುದಾರರಾಗಿ ಬಿಟ್ಟುಹೋಗಿರುವುದಾಗಿ ತಿಳಿಸಿರುತ್ತಾರೆ.

2. ಶ್ರೀ ಮಾಳಗಿ ಗೋವಿಂದಪ್ಪ ಇವರ ಮರಣಾನಂತರ ಶ್ರೀಮತಿ ಮಾಳಗಿ ಮಲ್ಲಮ್ಮ [ಪ್ರತಿವಾದಿ-1], ಮಕ್ಕಳಾದ 1] ಮಾಳಗಿ ರುದ್ರಪ್ಪ [ಪ್ರತಿವಾದಿ-2 ರಿಂದ 4 ರವರ ತಂದೆ], 2] ಮಾಳಗಿ ಗಿರಿಯಪ್ಪ [ವಾದಿ-1 ರವರ ಗಂಡ, ವಾದಿ-2 ರವರ ತಂದೆ] ಇವರುಗಳೆಲ್ಲರೂ ಸೇರಿ ಮಾಳಗಿ ಗೋವಿಂದಪ್ಪ ಇವರ ಇತರ ಎಲ್ಲಾ ಆಸ್ತಿಗಳ ಜೊತೆಗೆ ಸದರಿ ವ್ಯಾಜ್ಯದ ಜಮೀನನ್ನು ಸೇರಿಸಿ ದಿನಾಂಕ:26.12.1994 ರಂದು ಪಾಲು ವಿಭಾಗ ಮಾಡಿಸಿಕೊಂಡಿರುವುದಾಗಿ, ಸದರಿ ಪಾಲು ವಿಬಾಗ ಪತ್ರದ ಪ್ರಕಾರ 1] ಸ.ನಂ.537 ವಿಸ್ತೀರ್ಣ:01 ಎಕರೆ 25 ಸೆಂಟ್ಸ್; ಸ.ನಂ.511 ವಿಸ್ತೀರ್ಣ:02 ಎಕರೆ 13 ಸೆಂಟ್ಸ್; ಸ.ನಂ.509 ವಿಸ್ತೀರ್ಣ:00 ಎಕರೆ 25 ಸೆಂಟ್ಸ್; ಸ.ನಂ.510 ವಿಸ್ತೀರ್ಣ:00 ಎಕರೆ 45 ಸೆಂಟ್ಸ್; ಸ.ನಂ.970 ಪೈಕಿ ವಿಸ್ತೀರ್ಣ:05 ಎಕರೆ 93 ಸೆಂಟ್ಸ್; ಜಮೀನುಗಳು ಹಾಗೂ ಡೋರ್.ನಂ.50, ವಾರ್ಡ್.ನಂ.6 ಮನೆಯು **ಮಾಳಗಿ ಗಿರಿಯಪ್ಪ** ಇವರ ಪಾಲಿಗೆ ಬಂದಿರುವುದಾಗಿ, 2] ಸ.ನಂ.446; ಸ.ನಂ.447; ಸ.ನಂ.453 ಮತ್ತು ಸ.ನಂ.970 ರ ಪೈಕಿ ವಿಸ್ತೀರ್ಣ:05 ಎಕರೆ 92 ಸೆಂಟ್ಸ್; ಜಮೀನುಗಳು ಹಾಗೂ ಡೋರ್.ನಂ.54, ವಾರ್ಡ್.ನಂ.6 ಮನೆಯು **ಮಾಳಗಿ ಮಲ್ಲಮ್ಮ** ಹಾಗೂ **ಮಾಳಗಿ ರುದ್ರಪ್ಪ** ಇವರಿಗೆ ಜಂಟಿಯಾಗಿ ಪಾಲು ಬಂದಿರುವುದಾಗಿ, ಮತ್ತು ಸ.ನಂ.970 ರ ಪೈಕಿ ವಿಸ್ತೀರ್ಣ:00 ಎಕರೆ 50 ಸೆಂಟ್ಸ್; ಜಮೀನನ್ನು ಕುಟುಂಬದಲ್ಲಿಯ ಎಲ್ಲ ಸದಸ್ಯರ ಸಾಮಾನ್ಯ ಉಪಯೋಗಕ್ಕಾಗಿ ಬಿಟ್ಟಿರುವುದಾಗಿ ಸದರಿ ಜಮೀನಿನಲ್ಲಿ ಶ್ರೀ ಮಾಳಗಿ ಗೋವಿಂದಪ್ಪ ಇವರ ಹಾಗೂ ಇವರ ಪೂರ್ವಜರ ಸಮಾಧಿಗಳಿರುವುದಾಗಿ ತಿಳಿಸಿರುತ್ತಾರೆ. ಸದರಿ ಪಾಲು ವಿಭಾಗವು ನೋಂದಾಯಿತವಲ್ಲದ್ದಾಗಿರುವುದು ದಾಖಲೆಗಳಿಂದ ಕಂಡುಬಂದಿರುತ್ತದೆ.

3. ಪ್ರತಿವಾದಿ-1 ರವರಾದ ಶ್ರೀಮತಿ ಮಾಳಗಿ ಮಲ್ಲಮ್ಮ ಇವರು ದಿನಾಂಕ:.26.12.1994 ರ ಪಾಲು ವಿಭಾಗದ ಪ್ರಕಾರ ಪ್ರತಿವಾದಿ-5 ರವರಲ್ಲಿ ಹಕ್ಕು ಬದಲಾವಣೆಗಾಗಿ ಅರ್ಜಿ ಸಲ್ಲಿಸಿದ್ದು, ಆ ಪ್ರಕಾರವಾಗಿ ಹಕ್ಕು ಬದಲಾವಣೆ ಆದೇಶ ಸಂಖ್ಯೆ:40/1994-95 ದಿನಾಂಕ:30.01.1995 ರ ಪ್ರಕಾರ ಮಾಳಗಿ ಗಿರಿಯಪ್ಪ [ವಾದಿ-1 ರವರ ಗಂಡ, ವಾದಿ-2 ರವರ ತಂದೆ] ಇವರ ಹೆಸರಿಗೆ ಸ.ನಂ.970 ರ ಪೈಕಿ ವಿಸ್ತೀರ್ಣ:05 ಎಕರೆ 93 ಸೆಂಟ್ಸ್; ಜಮೀನನ್ನು ಮಾತ್ರ ಬಿಟ್ಟು ಉಳಿದ ಎಲ್ಲ ಜಮಿನುಗಳನ್ನು ಹಕ್ಕು ಬದಲಾವಣೆ ಮಾಡಿರುವುದಾಗಿ, ಸದರಿ ಆದೇಶವು ಕಂದಾಯ ಅಧಿಕಾರಿಗಳಿಂದಾಗಿರುವ ತಪ್ಪನ್ನು ರುಜುವಾತುಪಡಿಸುವುದಾಗಿ ಹಾಗೂ ಸದರಿ ವ್ಯಾಜ್ಯದ ಜಮಿನು ಶ್ರೀ ಮಾಳಗಿ ಗೋವಿಂದಪ್ಪ ಇವರ ಹೆಸರಿಗೆ ಹಾಗೆಯೇ ಮುಂದುವರೆದಿರುವುದಾಗಿ ತಿಳಿಸಿರುತ್ತಾರೆ. ಈ ಬಗ್ಗೆ ಹಕ್ಕು ಬದಲಾವಣೆ ಆದೇಶದ ನಮೂನೆ-21 ನ್ನು ಲಗತ್ತಿಸಿರುತ್ತಾರೆ.

4. ಶ್ರೀ ಮಾಳಗಿ ಗಿರಿಯಪ್ಪ [ವಾದಿ-1 ರವರ ಗಂಡ, ವಾದಿ-2 ರವರ ತಂದೆ] ಇವರು ದಿನಾಂಕ:15.07.2006 ರಂದು ಮರಣ ಹೊಂದಿರುವುದಾಗಿ, ಈ ಬಗ್ಗೆ ಮರಣ ಪ್ರಮಾಣ ಪತ್ರ ಲಗತ್ತಿಸಿರುತ್ತಾರೆ. ಸದರಿ ಸಂದರ್ಭದ ಹಾಗೂ ಪಹಣಿ ದಾಖಲೆಯಲ್ಲಿ ಸದರಿ ವ್ಯಾಜ್ಯದ ಜಮೀನಿನ ಪಹಣಿ ಪತ್ರಿಕೆಯಲ್ಲಿ ಶ್ರೀ ಮಾಳಗಿ ಗೋವಿಂದಪ್ಪ ಇವರ ಹೆಸರು ಮುಂದುವರೆದಿರುವುದರ ಪ್ರಯೋಜನ ಪಡೆದ

ಶ್ರೀಮತಿ ಮಾಳಗಿ ಮಲ್ಲಮ್ಮ [ಪ್ರತಿವಾದಿ-1] ಇವರು, ಇದಕ್ಕೂ ಪೂರ್ವದಲ್ಲಾದ ಪಾಲು ವಿಭಾಗದ ಬಗ್ಗೆ ತಿಳಿದೂ ಸಹ ಎಲ್ಲ ಸತ್ಯಾಂಶಗಳನ್ನು ಮುಚ್ಚಿಟ್ಟು ಜುಲೈ 2010 ರಂದು ಕಂದಾಯ ಅಧಿಕಾರಿಗಳ ಬಳಿ ತಮ್ಮ ಗಂಡನಾದ ಮಾಳಗಿ ಗೋವಿಂದಪ್ಪ ಇವರು ದಿನಾಂಕ:24.09.1994 ರಂದು ಮರಣ ಹೊಂದಿರುವುದಾಗಿ ತಮ್ಮ ಹೆಸರಿಗೆ ಹಕ್ಕು ಬದಲಾವಣೆಗಾಗಿ ಅರ್ಜಿ ಸಲ್ಲಿಸಿದ್ದು, ಕಂದಾಯ ಅಧಿಕಾರಿಗಳು ಈ ಹಿಂದೆ ಆದ ಹಕ್ಕು ಬದಲಾವಣೆಯನ್ನು ಗಮನಿಸದೇ, ಯಾವುದೇ ರೀತಿಯ ತನಿಖೆ ಕೈಗೊಳ್ಳದೇ ಹಕ್ಕು ಬದಲಾವಣೆ ಆದೇಶ ಸಂಖ್ಯೆ:356/2009-10 ದಿನಾಂಕ:08.07.2010 ರ ಮೂಲಕ ಪ್ರತಿವಾದಿ-1 ರವರು ತಮ್ಮ ಒಬ್ಬರ ಹೆಸರಿನಲ್ಲಿ ಮಾತ್ರ ಹಕ್ಕು ಬದಲಾವಣೆ ಮಾಡಿರುವುದಾಗಿ ಸದರಿ ಆದೇಶವು ಕಾನೂನು ಸಮ್ಮತವಲ್ಲದ ಹಾಗೂ ಸದರಿ ಆದೇಶವನ್ನು ತಳ್ಳಿಹಾಕುವಂತಹುದು ಎಂದು ತಿಳಿಸಿರುತ್ತಾರೆ.

5. ಪ್ರತಿವಾದಿ-1 ರವರು ಸ.ನಂ.970 ವಿಸ್ತೀರ್ಣ:12 ಎಕರೆ 35 ಸೆಂಟ್ಸ್; ಪೂರ್ಣ ಜಮೀನನ್ನು ತಮ್ಮ ಹೆಸರಿಗೆ ಹಕ್ಕು ಬದಲಾವಣೆ ಮಾಡಿಸಿಕೊಂಡಿದ್ದು, ಸ.ನಂ.970 ಪೈಕಿ ವಿಸ್ತೀರ್ಣ:05 ಎಕರೆ 93 ಸೆಂಟ್ಸ್; ಜಮೀನು ಪ್ರತಿವಾದಿಗಳ ಪಾಲಿಗೆ ಬಂದಿರುವುದನ್ನು ತಿಳಿದು ಅವರನ್ನು ವಂಚಿಸಿರುವುದಾಗಿ, ಮುಂದುವರೆದು, ರವರು ಸ.ನಂ.970 ವಿಸ್ತೀರ್ಣ:12 ಎಕರೆ 35 ಸೆಂಟ್ಸ್; ಜಮೀನನ್ನು ನೋಂದಾಯಿತ ದಾನ ಪತ್ರ ದಿನಾಂಕ:30.04.2014 ರ ಮೂಲಕ ಪ್ರತಿವಾದಿ-2 ರಿಂದ 4 ರವರಿಗೆ ನೀಡಿದ್ದು, ಸದರಿ ನೋಂದಾಯಿತ ದಾನ ಪತ್ರದ ಪ್ರಕಾರ ಪ್ರತಿವಾದಿ-5 ಮತ್ತು 6 ರವರು ಹಕ್ಕು ಬದಲಾವಣೆ ಆದೇಶ ಸಂಖ್ಯೆ:ಎಂ.ಆರ್.ನಂ.ಹೆಚ್.117/2013-14 ದಿನಾಂಕ:11.06.2014 ರ ಮೂಲಕ ಪ್ರತಿವಾದಿ-2 ರಿಂದ 4 ರವರ ಹೆಸರಿಗೆ ಹಕ್ಕು ಬದಲಾವಣೆ ಮಾಡಿರುವುದಾಗಿ, ಆ ಪ್ರಕಾರವಾಗಿ ಪ್ರತಿವಾದಿ-2 ರಿಂದ 4 ರವರ ಹೆಸರು ಪಹಣಿ ಪತ್ರಿಕೆಯಲ್ಲಿ ನಮುದಾಗಿರುವುದಾಗಿ ತಿಳಿಸಿರುತ್ತಾರೆ. ಈ ಬಗ್ಗೆ ಹಕ್ಕು ಬದಲಾವಣೆ ಆದೇಶ ಪ್ರತಿ ಲಗತ್ತಿಸಿರುತ್ತಾರೆ.

6. ಸದರಿ ಕಾನೂನುಸಮ್ಮತವಲ್ಲದ ಹಕ್ಕು ಬದಲಾವಣೆ ಬಗ್ಗೆ ಅಕ್ಟೋಬರ್ 2014 ರಂದು ವಾದಿಗಳಿಗೆ ತಿಳಿದ ನಂತರ ಪ್ರತಿವಾದಿ-6 ರ ಬಳಿ ದಿನಾಂಕ:26.12.1994 ರ ಪಾಲು ವಿಭಾಗದ ಪ್ರಕಾರ ವಾದಿಗಳು ತಮ್ಮ ಹೆಸರಿಗೆ ಸದರಿ ವ್ಯಾಜ್ಯದ ಸ.ನಂ.970 ಪೈಕಿ ವಿಸ್ತೀರ್ಣ:05 ಎಕರೆ 93 ಸೆಂಟ್ಸ್; ಜಮೀನನ್ನು ಹಕ್ಕು ಬದಲಾವಣೆ ಮಾಡಲು ಅರ್ಜಿ ಸಲ್ಲಿಸಿದ್ದು, ಪ್ರತಿವಾದಿ-6 ರವರು ಯಾವುದೇ ದಾಖಲೆಗಳನ್ನು ಪರಿಗಣಿಸದೇ ಕೇವಲ ಸದರಿ ಪಾಲು ವಿಭಾಗವು ನೋಂದಾಯಿತವಲ್ಲದ್ದಾಗಿದ್ದು, ಸದರಿ ದಾಖಲೆಯ ಆಧಾರದ ಮೇಲೆ ಹಕ್ಕು ಬದಲಾವಣೆ ಮಾಡಲು ಅವಕಾಶವಿರುವುದಿಲ್ಲವೆಂದು ಈ ಬಗ್ಗೆ ಮೇಲ್ಮನವಿ ಸಲ್ಲಿಸಿ ಪರಿಹಾರ ಕಂಡುಕೊಳ್ಳಲು ಸೂಚಿಸಿ ಸಂ.ಕಂ.ಪಹಣಿ/116/2014-15 ದಿನಾಂಕ:06.11.2014 ರ ಮೂಲಕ ಹಿಂಬರಹ ನೀಡಿರುವುದಾಗಿ, ಸದರಿ ಹಿಂಬರಹದಿಂದ ಬಾದಿತಗೊಂಡ ವಾದಿಗಳು ಸದರಿ ಹಕ್ಕು ಬದಲಾವಣೆ ಆದೇಶಗಳನ್ನು ರದ್ದುಪಡಿಸುವಂತೆ, ಹಾಗೂ ಹಕ್ಕು ಬದಲಾವಣೆ ಆದೇಶ ಸಂಖ್ಯೆ:40/1994-95 ದಿನಾಂಕ:30.01.1995 ರ ಪ್ರಕಾರ ಮಾಳಗಿ ಗಿರಿಯಪ್ಪ [ವಾದಿ-1 ರವರ ಗಂಡ, ವಾದಿ-2 ರವರ ತಂದೆ] ಇವರ ಹೆಸರಿಗೆ ಇರುವ ಸ.ನಂ.970 ರ ಪೈಕಿ ವಿಸ್ತೀರ್ಣ:05 ಎಕರೆ 93 ಸೆಂಟ್ಸ್; ಜಮೀನನ್ನು ವಾದಿಗಳ ಹೆಸರಿಗೆ ಹಕ್ಕು ಬದಲಾವಣೆ ಮಾಡಲು ಸೂಕ್ತ ನಿರ್ದೇಶನ ಕೋರಿ ಸದರಿ ಮೇಲ್ಮನವಿಯನ್ನು ಸಲ್ಲಿಸಿರುವುದಾಗಿ ವಾದಿಪರ ವಕೀಲರು ತಿಳಿಸಿರುತ್ತಾರೆ.

ಸದರಿ ಪ್ರಕರಣಕ್ಕೆ ಸಂಬಂಧಿಸಿದಂತೆ, ಮೇಲಿನ ಎಲ್ಲ ಅಂಶಗಳನ್ನು ಪರಿಶೀಲಿಸಲಾಗಿ ಹಾಗೂ ಪ್ರಕರಣದಲ್ಲಿಯ ದಾಖಲೆಗಳ ಆಧಾರದ ಮೇಲೆ, ಹೊಸಪೇಟೆ ತಾಲೂಕು ಕಮಲಾಪುರ ಹೋಬಳಿ ಕಮಲಾಪುರ ಗ್ರಾಮದ ಸ.ನಂ.970 ಪೈಕಿ ವಿಸ್ತೀರ್ಣ:12 ಎಕರೆ 35 ಸೆಂಟ್ಸ್; ವಿವಾದಾಸ್ಪದ ಜಮೀನಿಗೆ ಸಂಬಂಧಿಸಿದಂತೆ ಕಂದಾಯ ನಿರೀಕ್ಷಕರು, ಕಮಲಾಪುರ ಇವರ ಹಕ್ಕು ಬದಲಾವಣೆ ಆದೇಶ ಸಂಖ್ಯೆ: 1] ಎಂ.ಆರ್.ನಂ.356/2009-10 (ವಿಭಾಗ) ದಿನಾಂಕ:08.07.2010; ರ ಮೂಲಕ ಮಾಳಗಿ ಮಲ್ಲಮ್ಮ ಇವರ ಹೆಸರಿಗೆ ಪೂರ್ಣ ಜಮೀನು ಹಕ್ಕು ಬದಲಾವಣೆಯಾಗಿದ್ದು, ಆ ಸಂದರ್ಭದಲ್ಲಿ ಸದರಿ ಹಕ್ಕು ಬದಲಾವಣೆಯನ್ನು ಪ್ರಶ್ನಿಸಿರುವುದಿಲ್ಲ ಹಾಗೂ

ಸದರಿ ಪಾಲು ವಿಭಾಗವು ನೋಂದಾಯಿತವಲ್ಲದ್ದಾಗಿದ್ದು, ಕಾಲಮಿತಿ ಮೀರಿರುತ್ತದೆ. ಆದರೆ ಸದರಿ ವಿವಾದಿತ ನೋಂದಾಯಿತವಲ್ಲದ ಪಾಲು ವಿಭಾಗ ಪತ್ರದ ಮೇಲೆ ಕಂದಾಯ ನಮೂದುಗಳನ್ನು ಬದಲಾಯಿಸಿದ್ದು, ಈ ಬಗ್ಗೆ ಸದರಿ ವಿಭಾಗ ಪತ್ರದ ಕಾನೂನು ಸಮ್ಮತತೆ ನಿರ್ಣಯಿಸುವ ಅಧಿಕಾರ ಕಂದಾಯ ಅಧಿಕಾರಿಗಳಿಗೆ ಇರುವುದಿಲ್ಲ. ಇದನ್ನು ನಿರ್ಣಯಿಸುವ ಅಧಿಕಾರ ಮಾನ್ಯ ಸಿವಿಲ್ ನ್ಯಾಯಾಲಯಕ್ಕೆ ಮಾತ್ರ ಇರುತ್ತದೆ.

ಮುಂದುವರೆದು, ಎಂ.ಆರ್.ನಂ.:ಹೆಚ್.117/2013-14 (ದಾನ) ದಿನಾಂಕ:11.06.2014 ರಲ್ಲಿ ದಾನ ಪತ್ರದ ಮೂಲಕ ಹಕ್ಕು ಬದಲಾವಣೆಯಾಗಿರುವುದು ಕಂಡುಬಂದಿದ್ದು, ಸದರಿ ಹಕ್ಕುಬದಲಾವಣೆಯು ನೋಂದಾಯಿತ ದಾನ ಪತ್ರ ದಸ್ತಾವೇಜು ಸಂಖ್ಯೆ:378/2014-15 ದಿನಾಂಕ:30.04.2014 ರ ಪ್ರಕಾರ ಆಗಿರುವುದು ಕಂಡುಬಂದಿರುತ್ತದೆ. ಸದರಿ ನೋಂದಾಯಿತ ದಾಖಲೆಯ ನೈಜತೆಯನ್ನು ನಿರ್ಣಯಿಸುವ ಅಧಿಕಾರ ಕಂದಾಯ ಅಧಿಕಾರಿಗಳಿಗೆ ಇರುವುದಿಲ್ಲ. ಇದನ್ನು ನಿರ್ಣಯಿಸುವ ಅಧಿಕಾರ ಮಾನ್ಯ ಸಿವಿಲ್ ನ್ಯಾಯಾಲಯಕ್ಕೆ ಮಾತ್ರ ಇರುತ್ತದೆ. ಕಾರಣ ಈ ಬಗ್ಗೆ ವಾದಿಗಳು ಮಾನ್ಯ ಸಿವಿಲ್ ನ್ಯಾಯಾಲಯದಲ್ಲಿ ಮೇಲ್ಮನವಿ ಸಲ್ಲಿಸಿ ತಮ್ಮ ಹಕ್ಕನ್ನು ಸಾಬೀತುಪಡಿಸಿಕೊಳ್ಳಲು ಈ ಕೆಳಕಂಡಂತೆ

## -: ಆದೇಶ :-

ಪೀಠಿಕೆಯಲ್ಲಿ ವಿವರಿಸಿದ ಸಂದರ್ಭ, ವಾಸ್ತವಾಂಶ, ಹಿನ್ನಲೆ ಮತ್ತು ಕಾರಣಗಳ ಆಧಾರದ ಮೇಲೆ **ಅಪೀಲನ್ನು ವಜಾಗೊಳಿಸುತ್ತಾ,** ಹೊಸಪೇಟೆ ತಾಲೂಕು ಕಮಲಾಪುರ ಹೋಬಳಿ ಕಮಲಾಪುರ ಗ್ರಾಮದ ಸ.ನಂ.970 ಪೈಕಿ ವಿಸ್ತೀರ್ಣ:12 ಎಕರೆ 35 ಸೆಂಟ್ಸ್; ವಿವಾದಾಸ್ಪದ ಜಮೀನಿಗೆ ಸಂಬಂಧಿಸಿದಂತೆ, ವಿವಾದಿತ ನೋಂದಾಯಿತವಲ್ಲದ ಪಾಲು ವಿಭಾಗದ ಪತ್ರಕ್ಕೆ ಸಂಬಂಧಿಸಿದಂತೆ ತಮ್ಮ ಹಕ್ಕನ್ನು ಸಾಬೀತುಪಡಿಸಿಕೊಳ್ಳಲು ಮಾನ್ಯ ಸಿವಿಲ್ ನ್ಯಾಯಾಲಯದಲ್ಲಿ ಮೇಲ್ಮನವಿ ಸಲ್ಲಿಸಿ ಪರಿಹಾರ ಕಂಡುಕೊಳ್ಳಲು ಆದೇಶಿದೆ.

ಈ ಆದೇಶವನ್ನು ಹೇಳಿ ಬರೆಯಿಸಿ, ಗಣಕೀರಣ ಮಾಡಿಸಿ, ತಪ್ಪುಗಳನ್ನು ಸರಿಪಡಿಸಿ, ಈ ದಿನ ದಿನಾಂಕ:09.06.2016 ರಂದು ತೆರೆದ ನ್ಯಾಯಾಲಯದಲ್ಲಿ ಘೋಷಿಸಿದೆ.

**[ ಅವಿನಾಶ್ ಮೆನನ್ ರಾಜೇಂದ್ರನ್, ಭಾ.ಆ.ಸೇ ]**
**ಸಹಾಯಕ ಆಯುಕ್ತರು,**
**ಹೊಸಪೇಟೆ.**

ವಾದಿ : ಪ್ರತಿವಾದಿಗಳಿಗೆ
<u>ಪ್ರತಿಯನ್ನು</u>:- ತಹಶೀಲ್ದಾರರು, ಹೊಸಪೇಟೆ ಇವರಿಗೆ ಸಂಬಂಧಿಸಿದ ಮೂಲ ಕಡತದೊಂದಿಗೆ
ಸೂಕ್ತ ಕ್ರಮಕ್ಕಾಗಿ ರವಾನಿಸಿದೆ.

ರವಾನಿಸಲಾಗಿದೆ : 15/6/16